**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2124 (2459) |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 27/03/2026 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕ್ರೈಸ್ ನಿಂದ ಯಾವ ಸಾಫ್ಟವೇರ್ (ತಂತ್ರಾಂಶ) ಯಾವ ಕಂಪನಿಯಿಂದ ಖರೀದಿಸಲಾಗಿದೆ; | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 874 (ಪರಿಶಿಷ್ಟ ಜಾತಿ -539, ಪರಿಶಿಷ್ಟ ವರ್ಗ-156 ಹಾಗೂ ಹಿಂದುಳಿದ ವರ್ಗ-179) ವಸತಿ ಶಾಲೆ/ಕಾಲೇಜುಗಳು ಕಾರ್ಯನಿರ್ವಹಿತ್ತಿವೆ.<br>ಸಂಘದ ವಸತಿ ಶಾಲೆ/ ಕಾಲೇಜುಗಳಿಗೆ 19860 (9261 ಬೋಧಕ, 2386 ಬೋಧಕೇತರ, 8213-ಗ್ರೂಪ್-ಡಿ) ಬೋಧಕ, ಬೋಧಕೇತರ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳು ಮಂಜೂರಾಗಿರುತ್ತವೆ. ಇದರಲ್ಲಿ 5456 ಬೋಧಕ ವೃಂದದವರು ಹಾಗೂ 1120 ಬೋಧಕೇತರ ಖಾಯಂ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ.<br>ವಸತಿ ಶಾಲೆ/ಕಾಲೇಜುಗಳ ವಿದ್ಯಾರ್ಥಿಗಳ ಮಾಹಿತಿ ಸಂಗ್ರಹಣೆ, ಸಿಬ್ಬಂದಿಗಳ ವೇತನ ಮತ್ತು ವಸತಿ ಶಾಲೆ/ಕಾಲೇಜುಗಳ ಮಾಹಿತಿಯನ್ನು ಪಡೆಯುವ ಉದ್ದೇಶದಿಂದ ಹಾಗೂ ಕೇಂದ್ರ ಕಛೇರಿಯ ಸುಗಮ ಆಡಳಿತ ನಿರ್ವಹಣೆಗಾಗಿ ಈ ಕೆಳಕಂಡ ತಂತ್ರಾಂಶಗಳನ್ನು ಅನುಷ್ಠಾನ ಗೊಳಿಸಲಾಗಿರುತ್ತದೆ.<br>1) ಸಂಘದ ವಸತಿ ಶಾಲೆಗಳ ಖಾಯಂ ಸಿಬ್ಬಂದಿಗಳ ವೇತನವನ್ನು ಪಾವತಿಸುವ ಉದ್ದೇಶದಿಂದ E-Governance ಮುಖಾಂತರ HRMS ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.<br>2) ಸಂಘದ ಕೇಂದ್ರ ಕಛೇರಿಯಿಂದಲೇ ಸಿದ್ದಪಡಿಸಿರುವ Inhouse ತಂತ್ರಾಂಶದಲ್ಲಿ ವಸತಿ ಶಾಲೆ/ಕಾಲೇಜುಗಳ ಮಾಹಿತಿ, ಹೊರಸಂಪನ್ಮೂಲ ಸಿಬ್ಬಂದಿಗಳ ವೇತನ, ವಿದ್ಯುತ್ ಬಿಲ್ ಇತ್ಯಾದಿ ಮಾಹಿತಿ ಸಂಗ್ರಹಣೆಯನ್ನು School Management system (SMS): ತಂತ್ರಾಂಶದಡಿ Karnataka State Data Centre ನಲ್ಲಿ ಸಂಗ್ರಹಿಸಲಾಗುತ್ತಿದೆ.<br>3) ಸಂಘದ ಕೇಂದ್ರ ಕಛೇರಿಯ ಕಡತಗಳ ಇ-ಕಡತ ನಿರ್ವಹಣೆ ಮಾಡಲು E-Governance ಮುಖಾಂತರ E-Office ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.<br>4) ವಸತಿ ಶಾಲೆ/ಕಾಲೇಜುಗಳ ಸ್ವಂತ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಗುತ್ತಿಗೆದಾರರಿಗೆ ಬಿಲ್ಲುಗಳ ಪಾವತಿಗಾಗಿ ಕಿಯೋನಿಕ್ಸ್ ಮುಖಾಂತರ Spatika ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. |

| | | |
|---|---|---|
| | | 5) Financial Management system (FMS): ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಕ್ಕೆ ವಸತಿ ಶಾಲೆ/ ಕಾಲೇಜುಗಳ ನಿರ್ವಹಣೆಗಾಗಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಗೆ ನಿಗಧಿಪಡಿಸಿರುವ ಲೆಕ್ಕಶೀರ್ಷಿಕೆವಾರು ಆಯಾ ಇಲಾಖೆವಾರು ಅನುದಾನ ಹಂಚಿಕೆಯಾಗಿ ಬಿಡುಗಡೆಯಾಗುತ್ತಿದೆ. ಇಲಾಖೆವಾರು ಬಿಡುಗಡೆಯಾಗುವ ಅನುದಾನದಲ್ಲಿ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆ, ಸಿಬ್ಬಂದಿಗಳ ವೇತನ, ಆಹಾರ, ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಸಂಸ್ಥೆಗಳಿಗೆ ಬಿಲ್ಲುಗಳ ಪಾವತಿಗಾಗಿ ಹಾಗೂ ಹಲವಾರು ಹಣಕಾಸು ಚಟುವಟಿಕೆಗಳ ನಿರ್ವಹಣೆಗಾಗಿ 3N InfoTech ರವರಿಂದ Financial Management system (FMS) ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ.<br><br>ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ವಸತಿ ಶಾಲೆ/ಕಾಲೇಜುಗಳ ನಿರ್ವಹಣೆಗಳಿಗಾಗಿ School Management system (SMS) ತಂತ್ರಾಂಶವನ್ನು ಮೆ\|\| ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಲಾಗಿರುತ್ತದೆ. |
| ಆ) | ಯಾವ ಸಾಫ್ಟ್‌ವೇರ್ ಅನ್ನು ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ; ಯಾವಾಗ ಖರೀದಿಸಲಾಗಿದೆ; ಯಾವ ಉದ್ದೇಶಕ್ಕಾಗಿ ಯಾವ ಸಾಫ್ಟ್‌ವೇರ್ ಖರೀದಿಸಲಾಗಿದೆ; ಸರ್ಕಾರಿ ಆದೇಶದ ಸಂಖ್ಯೆ ಮತ್ತು ಪ್ರತಿಗಳನ್ನು ಒದಗಿಸುವುದು; | 2022-23 & 2023-24ನೇ ಸಾಲಿನಲ್ಲಿ SMS ತಂತ್ರಾಂಶವನ್ನು ಮೆ\|\| ಕಿಯೋನಿಕ್ಸ್ ಸಂಸ್ಥೆಯಿಂದ ರೂ.3.00 ಕೋಟಿಗಳ ಮೊತ್ತಕ್ಕೆ ವಸತಿ ಶಾಲೆ/ಕಾಲೇಜುಗಳ ಸುಗಮ ನಿರ್ವಹಣೆಗಾಗಿ ಖರೀದಿಸಲಾಗಿರುತ್ತದೆ.<br><br>Financial Management system (FMS) ತಂತ್ರಾಂಶವನ್ನು 3N InfoTech ಪ್ರತಿ ಮಾಹೆಯಾನ ರೂ. 63,250/- ರಂತೆ ಪಾವತಿಸಲಾಗುತ್ತಿದೆ.<br><br>Spatika ತಂತ್ರಾಂಶವನ್ನು ಕಿಯೋನಿಕ್ಸ್ ಸಂಸ್ಥೆಯಿಂದ ರೂ.39.86 ಲಕ್ಷಗಳ ಮೊತ್ತದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತಾಲಯ, ನಿಗಮ, ಮಂಡಳಿಗಳಲ್ಲಿ ಸಾಫ್ಟ್‌ವೇರ್ ನ್ನು ಅನುಷ್ಠಾನಗೊಳಿಸಲಾಗಿರುತ್ತದೆ.<br><br>ಸರ್ಕಾರದ ಆದೇಶದ ಪ್ರತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಖಾಸಗಿ ಕಂಪನಿಗಳಿಂದ ಸಾಫ್ಟ್ ವೇರ್ ಖರೀದಿಸಿರುವ ಅಗತ್ಯವೇನಿದೆ? | ವಸತಿ ಶಾಲೆಗಳ ನಿರ್ವಹಣೆ ಮಾಡುವ ಸಮಯದಲ್ಲಿ ಆರ್ಥಿಕ ಸ್ಥಿರತೆ ಮತ್ತು ನಿಯಂತ್ರಣವನ್ನು ಕಾಯ್ದುಕೊಳ್ಳಲು ಹಾಗೂ ಕರಾರುವಾಕ್ಕಾಗಿ ಲೆಕ್ಕಾಚಾರ ಸಂಗ್ರಹಣೆ ಮತ್ತು ನಿರ್ವಹಣೆಗಾಗಿ ತಂತ್ರಾಂಶಗಳ ಅವಶ್ಯಕತೆ ಇರುತ್ತದೆ. |

**SWD/139/MDS/2026**

**(ಡಾ: ಹೆಚ್.ಸಿ ಮಹದೇವಪ್ಪ)**

ಸಮಾಜ ಕಲ್ಯಾಣ ಸಚಿವರು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗಗಳಲ್ಲಿನ ವಸತಿ ಶಾಲೆ/ ಕಾಲೇಜುಗಳಿಗೆ ಎಸ್‌ಎಂಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಬಗ್ಗೆ.

**ಓದಲಾಗಿದೆ:** 1) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರ ಏಕ ಕಡತ ಸಂಖ್ಯೆ : KREIS/ INFR/ OTH/ 7/ 2022-ADMN

2) ದಿನಾಂಕ:20.01.2023 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿ.

******

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮಾಂಕ (1)ರ ಏಕ ಕಡತದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ಅಳವಡಿಸುವ ಸಂಬಂಧ ದಿನಾಂಕ:05.08.2022 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಮೈಸೂರು ಕಂದಾಯ ವಿಭಾಗದ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ರೂ.1.00 ಕೋಟಿ ಮಿತಿಯೊಳಗೆ ಅಳವಡಿಸಲು ತೀರ್ಮಾನಿಸಲಾಗಿರುತ್ತದೆ.

ಸೆಂಟರ್ ಫಾರ್ ಸ್ಮಾರ್ಟ್ ಗವರ್ನನ್ಸ್ ರವರ ಪತ್ರ ದಿನಾಂಕ:13.07.2022 ರಲ್ಲಿ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಸಂಬಂಧ ನಿಗಧಿಪಡಿಸಿದ ಎಸ್.ಎಂ.ಎಸ್. ತಂತ್ರಾಂಶವು Module based ತಂತ್ರಾಂಶವಾಗಿದ್ದು, ಮಾರುಕಟ್ಟೆಯಲ್ಲಿ ಲಭ್ಯವಿರುವುದಾಗಿ ತಿಳಿಸಿರುತ್ತಾರೆ ಹಾಗೂ ಸಂಘದ ಅಧೀನದ ಮೈಸೂರು ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ರೂ.1.00 ಕೋಟಿ ಮಿತಿಯೊಳಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ನಿಯಮಾನುಸಾರ ಅಳವಡಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2) ರ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 830 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆ/ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಸುಮಾರು 2,14,570 ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸುವಂತೆ ನಿರ್ಣಯಿಸಲಾಗಿದೆ. ಸದರಿ ಶಾಲೆ/ ಕಾಲೇಜುಗಳ ಪೈಕಿ ಬಹುತೇಕ ವಸತಿ ಶಾಲೆ/ ಕಾಲೇಜುಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಸತಿ ಶಾಲೆ/ ಕಾಲೇಜುಗಳ ಸುಗಮ ನಿರ್ವಹಣೆಗಾಗಿ 2017-18ನೇ ಸಾಲಿನಲ್ಲಿ ಬೆಂಗಳೂರು ಕಂದಾಯ ವಿಭಾಗದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 220 ವಸತಿ ಶಾಲೆ/ ಕಾಲೇಜುಗಳಿಗೆ ಮೆ|| ಕಿಯೋನಿಕ್ಸ್ ಸಂಸ್ಥೆಯು ವತಿಯಿಂದ School Management System ನ್ನು ಅಳವಡಿಸಲಾಗಿರುತ್ತದೆ.

ಮೆ|| ಕಿಯೋನಿಕ್ಸ್ ಸಂಸ್ಥೆಯಿಂದ ಅಳವಡಿಸಲಾಗಿರುವ ತಂತ್ರಾಂಶವು single source ತಂತ್ರಾಂಶವಾಗಿರುವುದರ ಬಗ್ಗೆ ಕೆಟಿಪಿಪಿ 1999 ರ ಕಲಂ 4(g) ರಡಿ 3 ಸದಸ್ಯರುಗಳನ್ನೊಳಗೊಂಡ ಸಮಿತಿಯು ನಿರ್ಧರಿಸಬೇಕಾಗಿರುವುದರಿಂದ Procuring agency, Academic Institution which smart Governance and commercial agency Keonics ರವರು ಹಾಜರಿದ್ದು, ಪ್ರಸ್ತುತ ಎಸ್.ಎಂ.ಎಸ್ ತಂತ್ರಾಂಶವನ್ನು ಹಿಂದಿನ ಸಾಲಿನಲ್ಲಿ ಅಳವಡಿಸಲಾದ ಸರಬರಾಜುದಾರರಿಂದಲೇ ಬಾಕಿ ಉಳಿದ ವಿಭಾಗಗಳಿಗೂ ಎಸ್.ಎಂ.ಎಸ್. ತಂತ್ರಾಂಶವನ್ನು ಅಳವಡಿಸುವ ಬಗ್ಗೆ, ಸೆಂಟರ್ ಫಾರ್ ಸ್ಮಾರ್ಟ್ ಗವರ್ನನ್ಸ್ ರವರನ್ನು ಅಭಿಪ್ರಾಯ ನೀಡುವಂತೆ ಸಭೆಗೆ ತಿಳಿಸಿದರು.

ಸದರಿ ಸಭೆಯಲ್ಲಿ, ಬೆಂಗಳೂರು ಕಂದಾಯ ವಿಭಾಗದ ವಸತಿ ಶಾಲೆ/ ಕಾಲೇಜುಗಳಿಗೆ ಅಳವಡಿಸಲಾದ ಎಸ್.ಎಂ.ಎಸ್. (School Management System) ತಂತ್ರಾಂಶವನ್ನು ಅಭಿವೃದ್ಧಿಪಡಿಸಿದ ಸಂಸ್ಥೆಯಿಂದಲೇ ಪ್ರಸ್ತುತ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಪ್ರತಿ ವಿಭಾಗಕ್ಕೆ ಅಂದಾಜು ರೂ.1.00 ಕೋಟಿಗಳ ವೆಚ್ಚದಲ್ಲಿ ಎಸ್.ಎಂ.ಎಸ್. ತಂತ್ರಾಂಶವನ್ನು ವಿಸ್ತರಿಸಿ ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಸಕಇ 401 ಎಂಡಿಎಸ್ 2022, ಬೆಂಗಳೂರು, ದಿನಾಂಕ: 08.02.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಿಭಾಗಗಳ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. (School Management System) ತಂತ್ರಾಂಶವನ್ನು ಅಳವಡಿಸಲು ಪ್ರತಿ ಕಂದಾಯ ವಿಭಾಗಕ್ಕೆ, ರೂ.1.00 ಕೋಟಿಗಳ (ಒಂದು ಕೋಟಿ ರೂಪಾಯಿಗಳು) ಮಾತ್ರ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಮ್ಯಾಕಿಯೋಸಿಸ್ ಸಂಸ್ಥೆಯಿಂದ ಕಾರ್ಯಗತಗೊಳಿಸಲು ಈ ಕೆಳಕಂಡ ಷರತ್ತುಗೊಳಪಟ್ಟು ಮಂಜೂರಾತಿ ನೀಡಿ ಆದೇಶಿಸಿದೆ.

**ಷರತ್ತುಗಳು:**

1. ಎಸ್.ಎಂ.ಎಸ್. (School Management System) ತಂತ್ರಾಂಶವನ್ನು ರಾಜ್ಯದಲ್ಲಿನ 830 ವಸತಿ ಶಾಲೆ/ಕಾಲೇಜುಗಳಿಗೂ 45 ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಅಂತಿಮ ಪರೀಕ್ಷೆಗಳು ಮುಗಿಯುವುದರೊಳಗಾಗಿ ಅಳವಡಿಸಲು ಕ್ರಮವಹಿಸುವುದು.
2. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಆಗದಂತೆ ಕ್ರಮವಹಿಸುವುದು.

ಈ ಆದೇಶವನ್ನು, ಸರ್ಕಾರದ ಆದೇಶ ಸಂಖ್ಯೆ:ಆಇ 01 ಎಕ್ಸ್‌ಪಿ 2023, ದಿನಾಂಕ:03.01.2023 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

[illegible]
ಸರ್ಕಾರದ ಅಧೀನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಗೆ:**

1) ಮಹಾಲೇಖಪಾಲರು, (ಜಿ & ಆ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3) [illegible] ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) [illegible] ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, [illegible]
5) [illegible]

**ಪ್ರತಿ:**

1) [illegible] ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) [illegible] ಕಾರ್ಯದರ್ಶಿಯವರ [illegible] ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ.
[illegible]

KREIS/EDN/OTH/37/2022-EDU

[redacted]358/2023

ಕರ್ನಾಟಕ ಸರ್ಕಾರ

**ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ**

Karnataka Residential Educational Institutions Society

KREIS/EDN/OTH/37/2022-EDU ದಿನಾಂಕ: 27.11.2023

## ಸರಬರಾಜು ಆದೇಶ

**ವಿಷಯ:-** ಕಲ್ಬುರ್ಗಿ ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಬಗ್ಗೆ

**ಉಲ್ಲೇಖ:-** ಸರ್ಕಾರದ ಆದೇಶ ಸಂಖ್ಯೆ: ಎಂಡಿಎಸ್/403/2022, ದಿ:07.03.2023

*****

ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ದಿನಾಂಕ:20.01.2023 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಸೆಕ್ಷನ್ 4(b) ರಡಿ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಮೈಸೂರು ಮತ್ತು ಬೆಳಗಾವಿ ವಿಭಾಗಗಳಿಗೆ ತಲಾ ರೂ. 1.00 ಕೋಟಿಯಂತೆ ಎಸ್.ಎಂ.ಎಸ್. ತಂತ್ರಾಂಶವನ್ನು ವಿಸ್ತರಿಸಲು ಅನುಮೋದನೆ ನೀಡಿ, ಕಲ್ಬುರ್ಗಿ ವಿಭಾಗದಲ್ಲಿ SMS ಸಾಫ್ಟ್‌ವೇರ್ ಅನ್ನು ಪರಿಶೀಲಿಸಿದ ನಂತರ 30 ದಿನಗಳಲ್ಲಿ ಸದರಿ ಸೌಲಭ್ಯವನ್ನು ವಿಸ್ತರಿಸಲು ಕ್ರಮವಹಿಸುವುದು ಹಾಗೂ ಮುಂದಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗುವುದರೊಳಗಾಗಿ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯಾಗದಂತೆ 4 ವಲಯಗಳಲ್ಲಿ ಎಸ್.ಎಂ.ಎಸ್. ತಂತ್ರಾಂಶವನ್ನು ವಿಸ್ತರಿಸಲು ಮತ್ತು ಎಸ್.ಎಂ.ಎಸ್ ಸಾಫ್ಟ್‌ವೇರ್ ನ್ನು ತಪಾಸಣೆಗಾಗಿ, ಆಹಾರದ ಗುಣಮಟ್ಟವನ್ನು ಅಳೆಯಲು, ಸೌಲಭ್ಯ ನಿರ್ವಹಣೆ(facility management) ಇತ್ಯಾದಿಗಳಿಗಾಗಿ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ.

ಉಲ್ಲೇಖ(1)ರ ಸರ್ಕಾರದ ಆದೇಶದನ್ವಯ ಕಲ್ಬುರ್ಗಿ ಕಂದಾಯ ವಿಭಾಗದA ವಸತಿ ಶಾಲೆ/ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಸಂಬಂಧ ಸ್ಪೆಸಿಫಿಕೇಶನ್ ಮತ್ತು Scope of work ನ್ನು ಅನುಬಂಧ-01ರಲ್ಲಿ ಲಗತ್ತಿಸಿದೆ.

ದಿನಾಂಕ:05.08.2022 ರಂದು ಜರುಗಿದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಪ್ರತಿ ವಸತಿ ಶಾಲೆ/ಕಾಲೇಜಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ಅಳವಡಿಸಲು ರೂ.50,521/-(ತೆರಿಗೆಗಳನ್ನು ಹೊರತುಪಡಿಸಿ) ಗಳಂತೆ ನಿಗಧಿಪಡಿಸಲಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಹಾಗೂ ಉಲ್ಲೇಖ(1)ರ ಸರ್ಕಾರಿ ಆದೇಶದನ್ವಯ ಕಲ್ಬುರ್ಗಿ ಕಂದಾಯ ವಿಭಾಗದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ಕಾಲೇಜುಗಳಿಗೆ ನಿಗಧಿತ ಸ್ಪೆಸಿಫಿಕೇಷನ್ ಮತ್ತು Scope of work ಅನ್ವಯ 206 ವಸತಿ ಶಾಲೆ/ಕಾಲೇಜುಗಳಿಗೆ ಪ್ರತಿ ವಸತಿ ಶಾಲೆ/ಕಾಲೇಜಿಗೆ ರೂ.50,521/-(ತೆರಿಗೆಗಳನ್ನು ಹೊರತುಪಡಿಸಿ) ಒಟ್ಟಾರೆ ರೂ. 1,04,07,326/-(ಒಂದು ಕೋಟಿ ನಾಲ್ಕು ಲಕ್ಷದ ಏಳು ಸಾವಿರದ ಮುನ್ನೂರ ಇಪ್ಪತ್ತಾರು ರೂಪಾಯಿಗಳು)ಗಳಲ್ಲಿ ಎಸ್.ಎಂ.ಎಸ್. ತಂತ್ರಾಂಶವನ್ನು ಅಳವಡಿಸಲು ಆದೇಶಿಸಿದೆ.

**ನಿಬಂಧನೆಗಳು :**

1. ಕಲ್ಬುರ್ಗಿ ಕಂದಾಯ ವಿಭಾಗದ ವಸತಿ ಶಾಲೆ/ಕಾಲೇಜುಗಳ ವಿವರಗಳನ್ನು ಅನುಬಂಧ-02 ರಲ್ಲಿ

ನೀಡಲಾಗಿದೆ.

2. ಅನುಬಂಧ-01 ರ Specification ಮತ್ತು Scope of work ಅನ್ವಯ ಎಸ್.ಎಂ.ಎಸ್. ತಂತ್ರಾಂಶವನ್ನು ಕಾರ್ಯಾದೇಶ ಪಡೆದ ದಿನಾಂಕದಿಂದ 45 ದಿನಗಳಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ಅಳವಡಿಸುವುದು.
3. ಎಸ್.ಎಂ.ಎಸ್. ತಂತ್ರಾಂಶವನ್ನು ವಸತಿ ಶಾಲೆ/ಕಾಲೇಜುಗಳಿಗೆ ಅಳವಡಿಸಿ, ಅಳವಡಿಸಿದ ಸಂಬಂಧ ವಸತಿ ಶಾಲೆ/ಕಾಲೇಜಿನ ಪ್ರಾಂಶುಪಾಲರು, ನಿಲಯಪಾಲಕರು, ಪ್ರಥಮ ದರ್ಜೆ ಸಹಾಯಕರು ಹಾಗೂ ಕಂಪ್ಯೂಟರ್ ಶಿಕ್ಷಕರಿಗೆ ಸದರಿ ತಂತ್ರಾಂಶವನು ಉಪಯೋಗಿಸುವ ಸಂಬಂಧ ತರಭೇತಿ ನೀಡುವುದು.
4. ಎಸ್.ಎಂ.ಎಸ್. ತಂತ್ರಾಂಶವನ್ನು ಅಳವಡಿಸಿದ ಬಗ್ಗೆ ಸಂಬಂಧಿಸಿದ ವಸತಿ ಶಾಲೆ/ಕಾಲೇಜುಗಳ ಪ್ರಾಂಶುಪಾಲರು/ನಿಲಯಪಾಲಕರಿಂದ ಬಿಲ್ಲಿನ ಹಿಂಭಾಗದಲ್ಲಿ ದೃಡೀಕರಣ ಪಡೆದು ಮೂಲ ಬಿಲ್ಲುಗಳ ದ್ವಿ-ಪ್ರತಿಯನು ಹಣ ಪಾವತಿಗಾಗಿ ಸಂಘದ ಕೇಂದ್ರ ಕಛೇರಿಗೆ ಸಲ್ಲಿಸುವುದು.
5. ದೃಢೀಕರಣಗೊಂಡ ಬಿಲ್ಲುಗಳು ಕೇಂದ್ರ ಕಛೇರಿಗೆ ಸಲ್ಲಿಕೆಯಾದ ನಂತರ ಒಟ್ಟು ಬಿಲ್ಲಿನ ಮೊತ್ತ ಶೇ.80 ರಷ್ಟನ್ನು ಪಾವತಿಸಿ ಬಾಕಿ ಉಳಿದ ಶೇ.20 ರಷ್ಟನ್ನು 3ನೇ ವ್ಯಕ್ತಿ ತಪಾಸಣೆ ಕೈಗೊಂಡು ತೃಪ್ತಿಕರ ವರದಿಯನ್ನಾಧರಿಸಿ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.
6. ಎಸ್.ಎಂ.ಎಸ್(School Management System) ತಂತ್ರಾಂಶವನ್ನು ನಿಗಧಿತ ಅವಧಿಯಲ್ಲಿ ಅಳವಡಿಸಲು ವಿಳಂಬ ಮಾಡಿದಲ್ಲಿ ಬಿಲ್ಲಿನ ಮೊತ್ತದ ಮೇಲೆ ಪ್ರತಿ ವಾರದ ವಿಳಂಭಕ್ಕೆ ಶೇ.0.25% ರಷ್ಟು ದಂಡ ವಿಧಿಸಲಾಗುವುದು.
7. ಎಸ್.ಎಂ.ಎಸ್. ತಂತ್ರಾಂಶದ ಅಳವಡಿಕೆ ಕಾರ್ಯ ಮುಕ್ತಾಯಗೊಳಿಸಿದ ದಿನದಿಂದ 2 ವರ್ಷಗಳ ವಾರಂಟಿ ಹಾಗೂ ಉಚಿತವಾಗಿ 2 ವರ್ಷ ನಿರ್ವಹಣಾ ಅವಧಿಯನ್ನು ತೃಪ್ತಿಕರವಾಗಿ ನಿರ್ವಹಿಸತಕ್ಕದ್ದು.
8. ಎಸ್.ಎಂ.ಎಸ್. ತಂತ್ರಾಂಶದ ನುರಿತ ಪರಿಣತರನ್ನು ಕೇಂದ್ರ ಕಛೇರಿಗೆ ನಿಯೋಜಿಸುವುದು ಮತ್ತು ಒಬ್ಬ ಮೇಲ್ವಿಚಾರಕರು ಆಗಿಂದ್ದಾಗೆ ಭೇಟಿ ನೀಡಿ ಸಲಹೆ, ಸೂಚನೆ ನೀಡುವುದು.
9. ಸರಬರಾಜು ಆದೇಶ ನೀಡಿದ ಏಳು ದಿನಗಳೊಳಗಾಗಿ ರೂ.200 ಇ-ಪೇಪರ್ ನಲ್ಲಿ ಕರಾರು ಮಾಡಿಕೊಳ್ಳಲು ತಿಳಿಸಿದೆ.
10. ಮೇಲ್ಕಂಡ ಯಾವುದೇ ನಿಬಂಧನೆಗಳನ್ನು ಉಲ್ಲಂಘಿಸಿದರೆ ಸರಬರಾಜು ಆದೇಶವನ್ನು ರದ್ದು ಪಡಿಸುವ ಅಧಿಕಾರ ಈ ಕಛೇರಿಸಿ ಮಾಡಿದ ಕಾರ್ಯನಿರ್ವಾಹಕ ನಿರ್ದೇಶಕರು ಹೊಂದಿರುತ್ತಾರೆ.

Signed by
NAVEEN KUMAR RAJU S
Date: 27-11-2023 18:03:48
ಕಾರ್ಯನಿರ್ವಾಹಕ ನಿರ್ದೇಶಕರು

ಗೆ,

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ,
ಬೆಂಗಳೂರು

ಪ್ರತಿಯನ್ನು:

1. ಮಾನ್ಯ ಸಚಿವರ ಆಪ್ತಕಾರ್ಯದರ್ಶಿಗಳು ಸಮಾಜ ಕಲ್ಯಾಣ ಇಲಾಖೆ ರವರು ಮಾನ್ಯ ಸಚಿವರ ಅವಗಾಹನೆಗೆ ತರುಲು ಮಾಹಿತಿಗಾಗಿ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಸಂಘದ ಉಪಾಧ್ಯಕ್ಷರು ಸಮಾಜ ಕಲ್ಯಾಣ ಇಲಾಖೆ ವಿಕಾಸಸೌಧ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
4. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
5. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು
6. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು/ಯೋಜನಾ ಸಮನ್ವಯ ಅಧಿಕಾರಿಗಳು, ಸಮಗ್ರ

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2022-23ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಮೈಸೂರು ಮತ್ತು ಬೆಳಗಾವಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಎಸ್‌ಎಂಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಬಗ್ಗೆ.

**ಓದಲಾಗಿದೆ:**
1) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು ಇವರ ಏಕ ಕಡತ ಸಂಖ್ಯೆ: KREIS/ INFR/ OTH/ 7/ 2022-ADMN
2) ದಿನಾಂಕ:20.01.2023 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿ
3) ಸರ್ಕಾರದ ಆದೇಶ ಸಂಖ್ಯೆ: ಸಕಇ 403 ಎಂಡಿಎಸ್ 2022, ದಿನಾಂಕ: 08.02.2023
4) ಸರ್ಕಾರದ ಆದೇಶ ಸಂಖ್ಯೆ: ಸಕಇ 403 ಎಂಡಿಎಸ್ 2022, ದಿನಾಂಕ: 16.02.2023
5) ಸರ್ಕಾರದ ಪತ್ರ ಸಂಖ್ಯೆ: ಸಕಇ 403 ಎಂಡಿಎಸ್ 2022, ದಿನಾಂಕ: 16.02.2023.

******

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಏಕ ಕಡತದಲ್ಲಿ, ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವರು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. ತ್ರಂತ್ರಾಂಶವನ್ನು ಅಳವಡಿಸುವ ಸಂಬಂಧ ದಿನಾಂಕ:05.08.2022 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಮೈಸೂರು ಕಂದಾಯ ವಿಭಾಗದ ವಸತಿ ಶಾಲೆ/ ಕಾಲೇಜುಗಳಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ರೂ.1.00 ಕೋಟಿ ಮಿತಿಯೊಳಗೆ ಅಳವಡಿಸಲು ತೀರ್ಮಾನಿಸಲಾಗಿರುತ್ತದೆ.

ಸೆಂಟರ್ ಫಾರ್ ಸ್ಮಾರ್ಟ್ ಗವರ್‌ನೆನ್ಸ್ ರವರ ಪತ್ರ ದಿನಾಂಕ:13.07.2022 ರಲ್ಲಿ ವಸತಿ ಶಾಲ/ ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸುವ ಸಂಬಂಧ ನಿಗಧಿಪಡಿಸಿದ ಎಸ್.ಎಂ.ಎಸ್. ತಂತ್ರಾಂಶವು Module based ತಂತ್ರಾಂಶವಾಗಿದ್ದು, ಮಾರುಕಟ್ಟೆಯಲ್ಲಿ ಲಭ್ಯವಿರುವುದಾಗಿ ತಿಳಿಸಿರುತ್ತಾರೆ ಹಾಗೂ ಸಂಘದ ಅಧೀನದ ಮೈಸೂರು ಕಂದಾಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲ/ ಕಾಲೇಜುಗಳಿಗೆ ಎಸ್.ಎಂ.ಎಸ್. ತಂತ್ರಾಂಶವನ್ನು ರೂ.1.00 ಕೋಟಿ ಮಿತಿಯೊಳಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ನಿಯಮಾನುಸಾರ ಅಳವಡಿಸಲು ಆಡಳಿತಾತ್ಮಕ ಅನುಮೋದನ ನೀಡಿ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2) ರ ತಾಂತ್ರಿಕ ಸಲಹಾ ಸಮಿತಿ ಸಭೆಯ ನಡವಳಿಯಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ 830 ವಸತಿ ಶಾಲೆ/ ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಸತಿ ಶಾಲೆ/ ಕಾಲೇಜುಗಳಲ್ಲಿ 2022-23ನೇ ಸಾಲಿನಲ್ಲಿ ಸುಮಾರು 2,14,570 ವಿದ್ಯಾರ್ಥಿಗಳು ವ್ಯಾಸಂಗ ಮಾಡಲು ಅವಕಾಶ ಕಲ್ಪಿಸುವಂತೆ ನಿರ್ಣಯಿಸಲಾಗಿದೆ. ಸದರಿ

-----2

ಶಾಲೆ/ಕಾಲೇಜುಗಳ ಪೈಕಿ ಬಹುತೇಕ ವಸತಿ ಶಾಲೆ/ ಕಾಲೇಜುಗಳು ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಸತಿ ಶಾಲೆ/ ಕಾಲೇಜುಗಳ ಸುಗಮ ನಿರ್ವಹಣೆಗಾಗಿ 2017-18ನೇ ಸಾಲಿನಲ್ಲಿ ಬೆಂಗಳೂರು ಕಂದಾಯ ವಿಭಾಗದ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 220 ವಸತಿ ಶಾಲೆ/ ಕಾಲೇಜುಗಳಿಗೆ ಮೆ|| ಕಿಯೋನಿಕ್ಸ್ ಸಂಸ್ಥೆಯ ವತಿಯಿಂದ School Management System ನ್ನು ಅಳವಡಿಸಲಾಗುತ್ತಿದೆ.

ಸದರಿ ಸಭೆಯಲ್ಲಿ ಬೆಂಗಳೂರು ಕಂದಾಯ ವಿಭಾಗದ ವಸತಿ ಶಾಲೆ/ ಕಾಲೇಜುಗಳಿಗೆ ಅಳವಡಿಸಲಾದ ಎಸ್.ಎಂ.ಎಸ್. (School Management System)ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ ಸಂಸ್ಥೆಯಿಂದಲೇ ಪ್ರಸ್ತುತ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆ/ ಕಾಲೇಜುಗಳಿಗೆ ಪ್ರತಿ ವಿಭಾಗಕ್ಕೆ ಅಂದಾಜು ರೂ.1.00 ಕೋಟಿಗಳ ವೆಚ್ಚದಲ್ಲಿ ಎಸ್.ಎಂ.ಎಸ್. ತಂತ್ರಾಂಶವನ್ನು ವಿಸ್ತರಿಸಿ ಅನುಷ್ಠಾನಗೊಳಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3) ರ ದಿನಾಂಕ:08.02.2023 ರ ಆದೇಶದಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಿಭಾಗಗಳ ವಸತಿ ಶಾಲೆ / ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸಲು ಪ್ರತಿ ಕಂದಾಯ ವಿಭಾಗಕ್ಕೆ ರೂ. 1.00 ಕೋಟಿಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಮೆ||ಕಿಯೋನಿಕ್ಸ್ ಸಂಸ್ಥೆಯಿಂದ ಕಾರ್ಯಗತಗೊಳಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) ರ ದಿನಾಂಕ:16.02.2023 ರ ಆದೇಶದಲ್ಲಿ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಿಭಾಗಗಳ ವಸತಿ ಶಾಲೆ / ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು ಅಳವಡಿಸಲು ಪ್ರತಿ ಕಂದಾಯ ವಿಭಾಗಕ್ಕೆ ರೂ.1.00 ಕೋಟಿಗಳ ವೆಚ್ಚದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರನ್ವಯ ಮೆ||ಕಿಯೋನಿಕ್ಸ್ ಸಂಸ್ಥೆಯಿಂದ ಕಾರ್ಯಗತಗೊಳಿಸಲು ಮಂಜೂರಾತಿ ನೀಡಿ ಹೊರಡಿಸಲಾದ ಆದೇಶ ಸಂಖ್ಯೆ: ಸಕಇ-ಎಂಡಿಎಸ್/403/2022, ದಿನಾಂಕ:08.02.2023 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮೇಲೆ ಓದಲಾದ ಕ್ರಮಾಂಕ (5) ರ ದಿನಾಂಕ:16.02.2023 ರ ಪತ್ರದಲ್ಲಿ ದಿನಾಂಕ:20.01.2023 ರಂದು ನಡೆದ ಎಸ್ಎಂಎಸ್ ತಂತ್ರಾಂಶವನ್ನು ಅಳವಡಿಸುವ ಸಂಬಂಧ ಜರುಗಿದ ಸಭೆಯ ನಡವಳಿಯನ್ವಯ ಈಗಾಗಲೇ ಬೆಂಗಳೂರು ಕಂದಾಯ ವಿಭಾಗದಿಂದ ಅನುಷ್ಠಾನಗೊಳಿಸಲಾಗಿರುವಂತೆಯೇ ಮೈಸೂರು, ಬೆಳಗಾವಿ ಮತ್ತು ಕಲ್ಬುರ್ಗಿ ಕಂದಾಯ ವಿಭಾಗಗಳು ಸೇರಿದಂತೆ ಇಡೀ ರಾಜ್ಯದ ವಸತಿ ಶಾಲೆ /ಕಾಲೇಜುಗಳಿಗೆ ಎಸ್.ಎಂ.ಎಸ್ (School Management System) ತಂತ್ರಾಂಶವನ್ನು 4(B) ರಡಿ ಅವಶ್ಯಕತೆಯ ಆಧಾರದ ಮೇಲೆ ಅಳವಡಿಸಲು ಸೂಕ್ತ ಕ್ರಮವಹಿಸುವಂತೆ ತಿಳಿಸಿ ಪತ್ರ ಬರೆಯಲಾಗಿದೆ.

ದಿನಾಂಕ:20.01.2023 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಸೆಕ್ಷನ್ 4(b) ರಡಿ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಮೈಸೂರು ಮತ್ತು ಬೆಳಗಾವಿ ವಿಭಾಗಗಳಿಗೆ ತಲಾ ರೂ.1.00 ಕೋಟಿಯಂತೆ ಎಸ್.ಎಂ.ಎಸ್ ತಂತ್ರಾಂಶವನ್ನು ವಿಸ್ತರಿಸಲು ಅನುಮೋದನೆ ನೀಡಿ, ಕಲ್ಬುರ್ಗಿ ವಿಭಾಗದಲ್ಲಿ SATS ಸಾಫ್ಟ್‌ವೇರ್ ಅನ್ನು ಪರಿಶೀಲಿಸಿದ ನಂತರ 30 ದಿನಗಳಲ್ಲಿ ಸದರಿ ಸೌಲಭ್ಯವನ್ನು ವಿಸ್ತರಿಸಲು ಕ್ರಮವಹಿಸುವುದು ಹಾಗೂ ಮುಂದಿನ ಶೈಕ್ಷಣಿಕ ವರ್ಷವು

-----3

ಪ್ರಾರಂಭವಾಗುವುದರೊಳಗಾಗಿ 4 ವಲಯಗಳಲ್ಲಿ ಎಸ್‌ಎಂಎಸ್ ತಂತ್ರಾಂಶವನ್ನು ವಿಸ್ತರಿಸಿದಲ್ಲಿ ಸರ್ಕಾರ ಮತ್ತು ಸಾರ್ವಜನಿಕರಿಗೆ 836 ವಸತಿ ಶಾಲೆಗಳ ಬಗ್ಗೆ ಪೂರ್ಣ ಮಾಹಿತಿ ಲಭ್ಯವಾಗುವುದೆಂದು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಕಇ-ಎಂಡಿಎಸ್/403/2022, ಬೆಂಗಳೂರು, ದಿನಾಂಕ:07.03.2023**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, ಸರ್ಕಾರದ ಪತ್ರ ಸಂಖ್ಯೆ: ಸಕಇ 403 ಎಂಡಿಎಸ್ 2022, ದಿನಾಂಕ:16.02.2023 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಮುಂದುವರೆದು, ದಿನಾಂಕ:20.01.2023 ರಂದು ನಡೆದ ತಾಂತ್ರಿಕ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಸೆಕ್ಷನ್ 4(b) ರಡಿ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಮೈಸೂರು ಮತ್ತು ಬೆಳಗಾವಿ ವಿಭಾಗಗಳಿಗೆ ತಲಾ ರೂ.1.00 ಕೋಟಿಯಂತೆ ಎಸ್.ಎಂ.ಎಸ್ ತಂತ್ರಾಂಶವನ್ನು ವಿಸ್ತರಿಸಲು ಅನುಮೋದನೆ ನೀಡಿ, ಕಲ್ಬುರ್ಗಿ ವಿಭಾಗದಲ್ಲಿ SATS ಸಾಫ್ಟ್‌ವೇರ್ ಅನ್ನು ಪರಿಶೀಲಿಸಿದ ನಂತರ 30 ದಿನಗಳಲ್ಲಿ ಸದರಿ ಸೌಲಭ್ಯವನ್ನು ವಿಸ್ತರಿಸಲು ಕ್ರಮವಹಿಸುವುದು ಹಾಗೂ ಮುಂದಿನ ಶೈಕ್ಷಣಿಕ ವರ್ಷವು ಪ್ರಾರಂಭವಾಗುವುದರೊಳಗಾಗಿ ಹಾಗೂ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆಯಾಗದಂತೆ 4 ವಲಯಗಳಲ್ಲಿ ಎಸ್‌ಎಂಎಸ್ ತಂತ್ರಾಂಶವನ್ನು ವಿಸ್ತರಿಸಲು ಮತ್ತು ಎಸ್‌ಎಂಎಸ್ ಸಾಫ್ಟ್ ವೇರ್ ನ್ನು ತಪಾಸಣೆಗಾಗಿ, ಆಹಾರದ ಗುಣಮಟ್ಟವನ್ನು ಅಳೆಯಲು, ಸೌಲಭ್ಯ ನಿರ್ವಹಣೆ (facility management) ಇತ್ಯಾದಿಗಳಿಗಾಗಿ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಅನುಷ್ಠಾನಗೊಳಿಸಲು ಅನುಮೋದನೆ ನೀಡಿದೆ.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ:ಆಇ 01 ಎಫ್ ಪಿ 2023, ದಿನಾಂಕ:03.01.2023 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪ್ರಭುಲಿಂಗಯ್ಯ)
ಸರ್ಕಾರದ ಅಪರ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

**ಇವರಿಗೆ:-**

1) ಮಹಾಲೇಖಪಾಲರು, (ಎ & ಇ ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ, ಬೆಂಗಳೂರು.
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು.
3) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ನಿಯಮಿತ, ಬೆಂಗಳೂರು.
5) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

**ಪ್ರತಿಗಳು:**

1) ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.